**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

**कर्नाटक-संस्कृत-विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु - ५६००१८.

ಸಂಖ್ಯೆ: ಕಸಂವಿ/ಪ್ರ.ಸ./2023-24/01

ದಿನಾಂಕ: 01-04-2024

ಮಾನ್ಯರೇ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ 38ನೆಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 06-03-2024 ಬುಧವಾರ ಮಧ್ಯಾಹ್ನ 03.00 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದಿತ್ತು. ಈ ಸಭೆಯ ನಡಾವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿದ್ದು ಅವಗಾಹಿಸಲು ಕೋರಿದೆ.

ಈ ಪತ್ರ ತಲುಪಿದ ದಿನಾಂಕದಿಂದ 10 ದಿನಗಳೊಳಗೆ ಯಾವುದೇ ಆಕ್ಷೇಪಣೆಗಳು (ಲಿಖಿತ/ಇ-ಮೇಲ್ ಮೂಲಕ) ಸ್ವೀಕೃತವಾಗದಿದ್ದಲ್ಲಿ ನಡಾವಳಿಗಳು ಮಾನ್ಯ ಸದಸ್ಯರಿಂದ ಅಂಗೀಕೃತವಾಗಿವೆ ಎಂದು ಭಾವಿಸಲಾಗುವುದು.

ವಂದನೆಗಳೊಂದಿಗೆ,

ಕುಲಸಚಿವರು

**ಕುಲಸಚಿವರು**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
**ಬೆಂಗಳೂರು - 560018.**

ಇವರಿಗೆ:

1. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
2. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು.
4. ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು-560012.
5. ಮಹಾ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ ಮೈಸೂರು
6. ಪ್ರೊ. ವಿ ಗಿರೀಶ್ ಚಂದ್ರ, ಡೀನ್, ಭಾಷಾ ನಿಕಾಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು
7. ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ, ಡೀನ್, ವೇದಾಂತ ನಿಕಾಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
8. ಡಾ. ಶಿವಾನಿ.ವಿ., ಡೀನ್, ಶಾಸ್ತ್ರ ನಿಕಾಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
9. ಪ್ರೊ.ಸಿ.ಪಾಲಯ್ಯ, ಡೀನ್, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.

10. ಡಾ. ಎಸ್. ದಯಾಶಂಕರ್, ಪ್ರಾಚಾರ್ಯರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018
11. ವಿದ್ವಾನ್ ಶ್ರೀಕಾಂತ ಪುರೋಹಿತ, ಪ್ರಾಚಾರ್ಯರು, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ –571811
12. ಶ್ರೀ ನಾಗಪತಿ ಕೇಶವ ಭಟ್ಟ, ಪ್ರಾಚಾರ್ಯರು, ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ ಸುರಕಟ್ಟೆ, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ –581334
13. ಶ್ರೀ ಆರ್.ಪಿ. ಜೋಶಿ, ಪ್ರಾಚಾರ್ಯರು, ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ, ಬಾಗಲಕೋಟೆ ಜಿಲ್ಲೆ –587301
14. ಶ್ರೀಮತಿ ಗೀತಾ ವೀರಯ್ಯ ಹಿರೇಮಠ, ಪ್ರಾಂಶುಪಾಲರು, ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಕಾಲೇಜು, ಹಿರೇಕಲ್ಮಠ, ಹೊನ್ನಾಳಿ, ದಾವಣಗೆರೆ ಜಿಲ್ಲೆ – 577212

**ಪ್ರತಿಗಳು:**

1. ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001
2. ಮಾನ್ಯ ಕುಲಪತಿಯವರ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು.
3. ಕಛೇರಿ ಪ್ರತಿ.

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालयः**
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## ದಿ: 06.03.2024ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 38ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ 38ನೇ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ದಿನಾಂಕ: 06-03-2024** ಬುಧವಾರ ಮಧ್ಯಾಹ್ನ 03.00 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು.

### ಸಭೆಯಲ್ಲಿ ಹಾಜರಿದ್ದವರು:

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು
2. ಶ್ರೀಮತಿ ಬಿ. ನೀಲಮ್ಮ, ರಿಜಿಸ್ಟ್ರಾರ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ – ಸದಸ್ಯರು
3. ಪ್ರೊ. ವಿ ಗಿರೀಶ್ ಚಂದ್ರ, ಡೀನ್, ಭಾಷಾ ನಿಕಾಯ, ಕ.ಸಂ.ವಿ. – ಸದಸ್ಯರು
4. ಪ್ರೊ.ಸಿ.ಪಾಲಯ್ಯ, ಡೀನ್, ಪ್ರಾಚೀನ ಭಾರತೀಯ ವಿಜ್ಞಾನ ನಿಕಾಯ, ಕ.ಸಂ.ವಿ. –ಸದಸ್ಯರು
5. ಡಾ. ಎಸ್. ದಯಾಶಂಕರ್, ಪ್ರಾಚಾರ್ಯರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018 – ಸದಸ್ಯರು
6. ವಿದ್ವಾನ್ ಶ್ರೀಕಾಂತ ಪುರೋಹಿತ, ಪ್ರಾಚಾರ್ಯರು, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ –571811 – ಸದಸ್ಯರು
7. ಶ್ರೀ ನಾಗಪತಿ ಕೇಶವ ಭಟ್ಟ, ಪ್ರಾಚಾರ್ಯರು, ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ ಸುರಕಟ್ಟೆ, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ –581334 – ಸದಸ್ಯರು
8. ಶ್ರೀ ಆರ್.ಪಿ. ಜೋಶಿ, ಪ್ರಾಚಾರ್ಯರು, ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ ಬಾಗಲಕೋಟೆ ಜಿಲ್ಲೆ –587301 – ಸದಸ್ಯರು
9. ಶ್ರೀಮತಿ ಗೀತಾ ವೀರಯ್ಯ ಹಿರೇಮಠ, ಪ್ರಾಂಶುಪಾಲರು, ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಕಾಲೇಜು, ಹಿರೇಕಲ್ಮಠ, ಹೊನ್ನಾಳಿ, ದಾವಣಗೆರೆ ಜಿಲ್ಲೆ – 577212 – ಸದಸ್ಯರು
10. ಪ್ರೊ. ವಿ ಗಿರೀಶ್ ಚಂದ್ರ, ಕುಲಸಚಿವರು(ಪ್ರ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು –ಸದಸ್ಯ ಕಾರ್ಯದರ್ಶಿಗಳು

### ಗೈರು ಹಾಜರಾದವರು:

1. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಮಹಾ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ ಮೈಸೂರು.
5. ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ, ಡೀನ್, ವೇದಾಂತ ನಿಕಾಯ, ಕ.ಸಂ.ವಿ.
6. ಡಾ. ಶಿವಾನಿ.ವಿ., ಡೀನ್, ಶಾಸ್ತ್ರ ನಿಕಾಯ, ಕ.ಸಂ.ವಿ.

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ವಿ.ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| 01. | **ಪ್ರಶಿಕ್ಷಣ ಪರಿಷತ್ತಿನ 37ನೇ ಸಭೆಯ ನಿರ್ಣಯದ ಅನುಪಾಲನಾ ವರದಿ.**<br>ದಿ: 03.01.2024ರಂದು **ಪ್ರಶಿಕ್ಷಣ ಪರಿಷತ್ತಿನ 37ನೇ ಸಭೆಯು** ನಡೆದಿತ್ತು. ದಿ: 12.01.2024ರಂದು ನಿಗದಿಯಾಗಿದ್ದ ಪ್ರಶಾಸನ ಸಮಿತಿಯ 69ನೇ ಸಭೆಯನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಿದ್ದರಿಂದ ದಿ:07.03.2024ರಂದು ನಡೆಯುವ ಪ್ರಶಾಸನ ಸಮಿತಿಯ 69ನೇ ಸಭೆಯಲ್ಲಿ ಈ ಸಭೆಯ ನಿರ್ಣಯವನ್ನು ಮಂಡಿಸಿ ಅನುಮೋದನೆ ಪಡೆದು ಮುಂದಿನ ಸಭೆಯಲ್ಲಿ ಅನುಪಾಲನಾ ವರದಿಯನ್ನು ಮಂಡಿಸಲಾಗುವುದು. |
| 02. | **Faculty of Ancient Indian Science ಅಡಿಯಲ್ಲಿ ಬಿ.ಎ. – ಭಾರತೀಯ ಇತಿಹಾಸ ಮತ್ತು ಬಿ.ಎಸ್ಸಿ – ಇಂಡಿಯನ್ ಸೈಕಾಲಜಿ ಕೋರ್ಸನ್ನು ಪ್ರಾರಂಭಿಸುವ ಬಗ್ಗೆ.**<br>ಭಾರತೀಯ ಜ್ಞಾನ–ವಿಜ್ಞಾನ ಪರಂಪರೆಯನ್ನು ಉಳಿಸಿ ಬೆಳೆಸುವುದು ಸಂಸ್ಕೃತ ವಿಶ್ವವಿದ್ಯಾಲಯದ ಜವಾಬ್ದಾರಿಗಳಲ್ಲೊಂದು. ಆದ್ದರಿಂದ ಭಾರತೀಯ ಮನಶ್ಶಾಸ್ತ್ರ ಮತ್ತು ಭಾರತೀಯ ಇತಿಹಾಸವನ್ನು ವಿದ್ಯಾರ್ಥಿಗಳಿಗೆ, ತನ್ಮೂಲಕ ಸಮಾಜಕ್ಕೆ ಪರಿಚಯಿಸುವ ಉದ್ದೇಶದಿಂದ ಬಿ.ಎ. – ಭಾರತೀಯ ಇತಿಹಾಸ ಮತ್ತು ಬಿ.ಎಸ್ಸಿ – ಇಂಡಿಯನ್ ಸೈಕಾಲಜಿ ಕೋರ್ಸನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪ್ರಾರಂಭಿಸಬಹುದಾಗಿದೆ. ಇದಕ್ಕೆ ಪೂರಕವಾಗಿ ಅಧ್ಯಯನ ಮಂಡಳಿ, ಪಾಠ್ಯಕ್ರಮಗಳನ್ನು ರಚಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು 2024–25ನೇ ಸಾಲಿನಿಂದ ಪ್ರಾಚೀನ ಭಾರತೀಯ ವಿಜ್ಞಾನ ನಿಕಾಯದಡಿಯಲ್ಲಿ ಬಿ.ಎ. – ಭಾರತೀಯ ಇತಿಹಾಸ ಮತ್ತು ಬಿ.ಎಸ್ಸಿ – ಇಂಡಿಯನ್ ಸೈಕಾಲಜಿ ಕೋರ್ಸನ್ನು ವಿಶ್ವವಿದ್ಯಾಲಯ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಪ್ರಾರಂಭಿಸುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **2024–25ನೇ ಸಾಲಿನಿಂದ ಭಾಷಾ ನಿಕಾಯದ ಅಡಿಯಲ್ಲಿ ಬಿ.ಎ. – ಇತಿಹಾಸ ಮತ್ತು Faculty of Ancient Indian Science ನಿಕಾಯದ ಅಡಿಯಲ್ಲಿ ಬಿ.ಎಸ್ಸಿ – ಸೈಕಾಲಜಿ ಕೋರ್ಸನ್ನು ಸರ್ಕಾರದ ಅನುಮತಿ ಪಡೆದು ಪ್ರಾರಂಭಿಸಲು ಸಭೆಯು ಅನುಮೋದಿಸಿತು.**<br>**ಅಲ್ಲದೇ ಸಂಸ್ಕೃತ ವಿಶ್ವವಿದ್ಯಾಲಯವು ಬಿ.ಎ. – ಶಾಸ್ತ್ರಿ ಮತ್ತು ಎಮ್.ಎ. – ಆಚಾರ್ಯ ಎಂದು ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳನ್ನು ನೀಡುತ್ತಿದ್ದು ಇವುಗಳನ್ನು ಸರ್ಕಾರದ ನೇಮಕಾತಿಯಲ್ಲಿ ಪರಿಗಣಿಸುವ ಬಗ್ಗೆ KPSCಗೆ/ಸರ್ಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಲಾಯಿತು.** |
| 03. | **ವಿಶ್ವವಿದ್ಯಾಲಯದಲ್ಲಿ ಬ್ಯಾಚಲರ್ ಆಫ್ ಲೈಬ್ರರಿ ಎಂಡ್ ಇನ್ಫಾರ್ಮೇಷನ ಸೈನ್ಸ್ (B.Lib.I.Sc.) ಕೋರ್ಸನ್ನು** |

| | |
|---|---|
| | ಪ್ರಾರಂಭಿಸುವ ಬಗ್ಗೆ.<br><br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸುಸಜ್ಜಿತವಾದ ಗ್ರಂಥಾಲಯವನ್ನು ಹೊಂದಿದ್ದು, 03 ಸಹಾಯಕ ಗ್ರಂಥಪಾಲಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಗ್ರಂಥಾಲಯ ಮತ್ತು ಮಾನವ ಸಂಪನ್ಮೂಲವನ್ನು ಬಳಸಿಕೊಂಡು ಭಾಷಾ ನಿಕಾಯದಡಿ ಗ್ರಂಥಾಲಯ ವಿಭಾಗದಿಂದ ಬಿ.ಲಿಬ್. ಕೋರ್ಸನ್ನು ಪ್ರಾರಂಭಿಸಬಹುದಾಗಿದೆ. ಇದಕ್ಕೆ ಪೂರಕವಾಗಿ ನಿಯಮಾವಳಿ, ಅಧ್ಯಯನ ಮಂಡಳಿ, ಪಾಠ್ಯಕ್ರಮಗಳನ್ನು ರಚಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು 2024-25ನೇ ಸಾಲಿನಿಂದ ವಿಶ್ವವಿದ್ಯಾಲಯದಲ್ಲಿ **ಬ್ಯಾಚಲರ್ ಆಫ್ ಲೈಬ್ರರಿ ಎಂಡ್ ಇನ್ಫಾರ್ಮೇಷನ ಸೈನ್ಸ್** (B.Lib.I.Sc.) ಕೋರ್ಸನ್ನು ಪ್ರಾರಂಭಿಸುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009, ಉಪಬಂಧ 5.1ರಂತೆ ವಿಶ್ವವಿದ್ಯಾಲಯವು ಪದವಿ/ಡಿಪ್ಲೊಮಾ ಮೊದಲಾದ ಕೋರ್ಸ್ ಗಳನ್ನು ಪ್ರಾರಂಭಿಸಬಹುದಾಗಿದ್ದು, ಸರ್ಕಾರದ ಅನುಮತಿ ಪಡೆದು 2024-25ನೇ ಸಾಲಿನಿಂದ ವಿಶ್ವವಿದ್ಯಾಲಯದಲ್ಲಿ** Faculty of Ancient Indian Science **ನಿಕಾಯದಡಿ ಬ್ಯಾಚಲರ್ ಆಫ್ ಲೈಬ್ರರಿ ಎಂಡ್ ಇನ್ಫಾರ್ಮೇಷನ ಸೈನ್ಸ್ (B.Lib.I.Sc.) ಕೋರ್ಸನ್ನು ಪ್ರಾರಂಭಿಸಲು ಸಭೆಯು ಅನುಮೋದಿಸಿತು.** |
| **04.** | **ಪ್ರಸಾರಾಂಗದ ವತಿಯಿಂದ ವಿವಿಧ ಪುಸ್ತಕಗಳನ್ನು ಮುದ್ರಿಸುವ ಬಗ್ಗೆ.**<br><br>1. **"ಸವಿಜ್ಞಾನಂ ತಂತ್ರಜ್ಞಾನಂ"**: ಪ್ರೊ. ಎಮ್. ಕೆ. ಶ್ರೀಧರ ಮತ್ತು ಪ್ರೊ. ವೈ. ಎಸ್. ಗಾಯತ್ರಿ ಇವರು "ಸವಿಜ್ಞಾನಂ ತಂತ್ರಜ್ಞಾನಂ" ಎಂಬುದು ಭಾರತೀಯ ವಿಜ್ಞಾನ ಪರಂಪರೆಯ ಪರಿಚಯಾತ್ಮಕ ಗ್ರಂಥ. ವಿಜ್ಞಾನದ ವಿವಿಧ ಶಾಖೆಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ, ಆಯುರ್ವೇದ, ಗಣಿತ, ಖಗೋಲಶಾಸ್ತ್ರ, ಜೀವವಿಜ್ಞಾನ ಮೊದಲಾದ ಅನೇಕ ಶಾಖೆಗಳನ್ನು ಇದರಲ್ಲಿ ಪರಿಚಯಿಸಲಾಗಿದೆ. ನಮ್ಮ ದೇಶದ ವಿಜ್ಞಾನ ಪರಂಪರೆಯನ್ನು ಪ್ರತಿಯೊಬ್ಬರೂ ತಿಳಿಯಬೇಕಾದ ಅಗತ್ಯವಿದ್ದು, ಈ ಪುಸ್ತಕದಿಂದ ವಿದ್ಯಾರ್ಥಿಗಳಿಗೆ ಮತ್ತು ಸಮಾಜಕ್ಕೆ ಉಪಯೋಗವಾಗುತ್ತದೆ. ಆದ್ದರಿಂದ ಈ ಪುಸ್ತಕವನ್ನು ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಮುದ್ರಿಸಬೇಕೆಂದು ಕೋರಿರುತ್ತಾರೆ.<br>2. **"ಭಾರತವರ್ಷೇ ಗಣಿತವೈಭವಂ"**: ಪ್ರೊ. ವೈ. ಎಸ್. ಗಾಯತ್ರಿ ಇವರು ಭಾರತದಲ್ಲಿ ಪ್ರಾಚೀನಕಾಲದಿಂದಲೂ ಬೆಳೆದುಬಂದ ಗಣಿತಶಾಸ್ತ್ರದ ಪರಂಪರೆಯನ್ನು **"ಭಾರತವರ್ಷೇ ಗಣಿತವೈಭವಂ"** ಕೃತಿಯು ಪರಿಚಯಿಸುತ್ತದೆ. ಪ್ರಾಚೀನ ಗಣಿತಜ್ಞರಾದ ಆರ್ಯಭಟ, ವರಾಹಮಿಹಿರ, ಬ್ರಹ್ಮಗುಪ್ತ, ಮಹಾವೀರಾಚಾರ್ಯ, ಭಾಸ್ಕರಾಚಾರ್ಯ ಮುಂತಾದವರ ಕೊಡುಗೆಗಳನ್ನು ಇದರಲ್ಲಿ ಪರಿಚಯಿಸಲಾಗಿದೆ. ಈ ಬಗ್ಗೆ ಗಣಿತಶಾಸ್ತ್ರಜ್ಞರು ಮತ್ತು ವಿದ್ಯಾರ್ಥಿಗಳು ಅವಶ್ಯವಾಗಿ ತಿಳಿದುಕೊಳ್ಳಬೇಕು. ಆದ್ದರಿಂದ ಈ ಪುಸ್ತಕವನ್ನು ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಮುದ್ರಿಸಬೇಕೆಂದು ಕೋರಿರುತ್ತಾರೆ. |

| | |
|---|---|
| | 3. ಡಾ. ಸುಬ್ರಾಯ ಈಶ್ವರ ಹೆಗಡೆ ಅವರ "**ಭಾರತೀಯ ಋಷಿಮುನಿಗಳು ಮತ್ತು ನದಿಗಳು**"ಎಂಬ ಪುಸ್ತಕ ಭಾರತೀಯ ಮಹಾಕಾವ್ಯ, ರಾಮಾಯಣ, ಮಹಾಭಾರತ ಮತ್ತು ಕಾಳಿದಾಸಾದಿ ಕವಿಗಳ ಕಾವ್ಯಗಳಲ್ಲಿ ಬರುವ ಪೌರಾಣಿಕವಾದ ನದಿಗಳು ಮತ್ತು ಋಷಿಗಳ ಬಗ್ಗೆ ಉಪಯುಕ್ತ ಮಾಹಿತಿಗಳನ್ನು ಹೊಂದಿದ್ದು, ಮೂಲ ಗ್ರಂಥವನ್ನು ಅರ್ಥಮಾಡಿಕೊಳ್ಳಲು ಬಹಳ ಉಪಯುಕ್ತವಾಗಿದೆ.<br>4. ಡಾ.ವೇಣಿಮಾಧವ ಶಾಸ್ತ್ರಿ ಅವರ "**ಕವಿತಾ ಶತಕಮ್**" ಎಂಬ ಪುಸ್ತಕ ನವೀನ ಸಂಸ್ಕೃತ ಕವಿಗಳ ಸಂಗ್ರಹ. ಸಂಸ್ಕೃತದಲ್ಲಿ ಕಾವ್ಯ ಬರೆಯಲು ವಿಶೇಷ ಸಂಸ್ಕೃತ ಭಾಷಾ ಜ್ಞಾನ ಹಾಗೂ ಅದಕ್ಕೆ ಸಂಬಂಧಪಟ್ಟ ಶಾಸ್ತ್ರಗಳ ಜ್ಞಾನಬೇಕು. ಆದ್ದರಿಂದ ನವೀನ ಸಂಸ್ಕೃತ ಕಾವ್ಯಗಳ ರಚನೆ ಬಹಳ ವಿರಳವಾಗಿದೆ. ಈ ಕಾವ್ಯ ಸಂಕಲನದಿಂದ ಮಿಕ್ಕ ಆಧುನಿಕ ಸಂಸ್ಕೃತ ಕವಿಗಳಿಗೆ ಸ್ಫೂರ್ತಿ ದೊರೆಯುತ್ತದೆ.<br>5. ಡಾ.ವೇಣಿಮಾಧವ ಶಾಸ್ತ್ರಿ ಅವರ "**ಭಾಲಚಂದ್ರಶಾಸ್ತ್ರಿಣಃ**" ಎಂಬ ಪುಸ್ತಕ ಕರ್ನಾಟಕ ಸಂಸ್ಕೃತ ಸಾರಸ್ವತೋಪಾಸಕರ ಜೀವನ ಚರಿತ್ರೆ ಈ ಗ್ರಂಥಮಾಲೆ ಅಡಿಯಲ್ಲಿ ಡಾ. ವೇಣಿಮಾಧವ ಶಾಸ್ತ್ರಿ ಅವರು ರಚಿಸಿರುವ ಶ್ರೀ ಬಾಲಚಂದ್ರ ಶಾಸ್ತ್ರಿಯವರ ಬಗ್ಗೆ ಮತ್ತು ಜ್ಞಾನ ಕ್ಷೇತ್ರಕ್ಕೆ ಅವರು ನೀಡಿರುವ ಕೊಡಗೆ ಅವರ ಜೀವನ ಮತ್ತು ಅವರು ನೀಡಿರುವ ವೇದಾಂತ ತತ್ವಗಳ ವಿಷಯಗಳನ್ನು ಕುರಿತು ಸಂಗ್ರಹವಾಗಿ ಬರೆದ ಗ್ರಂಥ. ಇದೊಂದು "ಜೀವನ ಚರಿತ್ರೆ", ಇದು ಸಂಸ್ಕೃತ ಸಾಹಿತ್ಯ ಶೈಲಿಯಲ್ಲಿ ವಿಶಿಷ್ಟವಾದ ಗ್ರಂಥವಾಗಿದೆ.<br><br>ಈ ಬಗ್ಗೆ ರಚಿಸಲಾದ ತಜ್ಞರ ಸಮಿತಿಯು ದಿ: 23.02.2024ರಂದು ಸದರಿ ಪುಸ್ತಕಗಳನ್ನು ಮುದ್ರಿಸಬಹುದೆಂದು ವರದಿ ನೀಡಿದೆ. ಸದರಿ ಪುಸ್ತಕಗಳನ್ನು ಪ್ರಸಾರಾಂಗದ ವತಿಯಿಂದ ಮುದ್ರಿಸುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಪ್ರಸ್ತುತ 05 ಪುಸ್ತಕಗಳನ್ನು ಮುದ್ರಿಸಲು ಸಭೆಯು ಅನುಮೋದಿಸಿತು. ಮುಂದಿನ ದಿನಗಳಲ್ಲಿ ಪುಸ್ತಕ ಮುದ್ರಣದ ಬಗ್ಗೆ ಪರಿಶೀಲಿಸಲು ಈ ಕೆಳಗಿನಂತೆ ಪಂಚ ಸದಸ್ಯರ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು.**<br>**1. ಪ್ರಶಿಕ್ಷಣ ಪರಿಷತ್ತಿನ ಸದಸ್ಯರು**<br>**2. ಬಾಹ್ಯ ತಜ್ಞರು**<br>**3. ಡೀನ್**<br>**4. ಪ್ರಸಾರಾಂಗದಿಂದ ಒಬ್ಬರು**<br>**5. ಗ್ರಂಥಾಲಯದಿಂದ ಒಬ್ಬರು** |
| **05.** | **ಸಂಯೋಜಿತ ಕಾಲೇಜಿನ ಅರ್ಹ ಅಧ್ಯಾಪಕರಿಗೆ Ph.D. ಮಾರ್ಗದರ್ಶಕತ್ವ ನೀಡುವ ಬಗ್ಗೆ.**<br><br>ದಿನಾಂಕ: 24.05.2022ರಂದು ನಡೆದ ವೇದಾಂತ/ನ್ಯಾಯ & ವೈಶೇಷಿಕ ವಿಭಾಗದ ಅಧ್ಯಯನ ಮಂಡಳಿಯು ಸಂಯೋಜಿತ ಕಾಲೇಜಿನ 2 ಸಹಾಯಕ ಪ್ರಾಧ್ಯಾಪಕರು ಯು.ಜಿ.ಸಿ ನಿಯಮದಂತೆ ಪಿಎಚ್.ಡಿ. |

| | |
|---|---|
| | ಮಾರ್ಗದರ್ಶಕರಾಗಲು ಅರ್ಹರಿರುವುದರಿಂದ 2023–24ನೇ ಸಾಲಿನಿಂದ ಪಿಎಚ್.ಡಿ–ವಿದ್ಯಾವಾರಿಧಿ 'ಮಾರ್ಗದರ್ಶಕ'ರಾಗಿ ಮಾನ್ಯತೆಯನ್ನು ನೀಡಬಹುದೆಂದು ಶಿಫಾರಸ್ಸು ಮಾಡಿದೆ.<br><br>**ಹೆಸರು/ಪದನಾಮ** — **ವಿಷಯ**<br>**ಡಾ. ಸತ್ಯನಾರಾಯಣ** ಸಹಾಯಕ ಪ್ರಾಧ್ಯಾಪಕರು, ವಿಶಿಷ್ಟಾದ್ವೈತವೇದಾಂತ ವಿಭಾಗ ಮಹಾರಾಜ ಸರ್ಕಾರಿ ಸಂಸ್ಕೃತ ಮಹಾವಿದ್ಯಾಲಯ, ಮೈಸೂರು. — ವೇದಾಂತ<br>**ಡಾ. ಶ್ರೀಕಾಂತ ಪುರೋಹಿತ** ಸಹಾಯಕ ಪ್ರಾಧ್ಯಾಪಕರು ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದಾಗಮ ಸಂಸ್ಕೃತ ಕಾಲೇಜು, ಆದಿಚುಂಚನಗಿರಿ — ವೇದಾಂತ, ನ್ಯಾಯ & ವೈಶೇಷಿಕ<br><br>ಅದರಂತೆ ಈ ಮೇಲಿನಂತೆ ಇಬ್ಬರಿಗೆ ಪಿಎಚ್.ಡಿ. ಮಾರ್ಗದರ್ಶಕತ್ವ ನೀಡುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಡಾ. ಸತ್ಯನಾರಾಯಣ** ಸಹಾಯಕ ಪ್ರಾಧ್ಯಾಪಕರು, ವಿಶಿಷ್ಟಾದ್ವೈತವೇದಾಂತ ವಿಭಾಗ, ಮಹಾರಾಜ ಸರ್ಕಾರಿ ಸಂಸ್ಕೃತ ಮಹಾವಿದ್ಯಾಲಯ, ಮೈಸೂರು ಇವರಿಗೆ ವೇದಾಂತ ವಿಷಯದಲ್ಲಿ ಮತ್ತು **ಡಾ. ಶ್ರೀಕಾಂತ ಪುರೋಹಿತ,** ಸಹಾಯಕ ಪ್ರಾಧ್ಯಾಪಕರು ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದಾಗಮ ಸಂಸ್ಕೃತ ಕಾಲೇಜು, ಆದಿಚುಂಚನಗಿರಿ ಇವರಿಗೆ ವೇದಾಂತ ಹಾಗೂ ನ್ಯಾಯ & ವೈಶೇಷಿಕ ವಿಷಯದಲ್ಲಿ ಪಿಎಚ್.ಡಿ. ಮಾರ್ಗದರ್ಶಕತ್ವ ನೀಡಲು ಅನುಮೋದಿಸಲಾಯಿತು.<br>ಪಿಎಚ್.ಡಿ. ಮಾರ್ಗದರ್ಶಕತ್ವ ನೀಡಲು ನಿಗದಿತ ನಮೂನೆಯಲ್ಲಿ ಅರ್ಜಿ ಆಹ್ವಾನಿಸಲು ಸದಸ್ಯರು ಸಲಹೆ ನೀಡಿದರು |
| 06. | **ಯೋಜನಾ ಸಹಾಯಕರನ್ನು(ಶೈಕ್ಷಣಿಕ) ವಿವಿಧ ವಿಭಾಗಗಳಲ್ಲಿ ಸ್ಥಿರೀಕರಣಗೊಳಿಸುವ ಬಗ್ಗೆ.**<br><br>ಸರ್ಕಾರದ ಆದೇಶ ಸಂಖ್ಯೆ: ಇಡಿ 91 ಯುಆರ್‌ಸಿ 2010, ದಿ: 25.01.2011ರಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ 26 ರಾಜ್ಯ ವೇತನ ಪಡೆಯುವ ಬೋಧಕ ಹುದ್ದೆಗಳು ಮಂಜೂರಾಗಿದ್ದು, ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಈ ಹುದ್ದೆಯನ್ನು ಯೋಜನಾ ಸಹಾಯಕ(ಶೈಕ್ಷಣಿಕ) ಎಂದು ಪದನಾಮಗೊಳಿಸಿ ವಿವಿಧ ಹಂತದಲ್ಲಿ 16 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇವು ಬೋಧಕ ಹುದ್ದೆಯಾದುದರಿಂದ ಇವರು ಬೋಧನೆ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಬೇಕು. ಪ್ರಶಿಕ್ಷಣ ಪರಿಷತ್ತಿನ 13ನೇ ಸಭೆಯ ನಿರ್ಣಯದಂತೆ 10 ಯೋಜನಾ ಸಹಾಯಕರನ್ನು(ಶೈಕ್ಷಣಿಕ) ಆಯಾ ನಿಕಾಯದಡಿ ಸ್ಥಿರೀಕರಿಸಲಾಗಿದೆ. ಪ್ರಸ್ತುತ, ಎಲ್ಲಾ ಯೋಜನಾ ಸಹಾಯಕರನ್ನು(ಶೈಕ್ಷಣಿಕ) ಅವರ ವಿಶೇಷ |

| | |
|---|---|
| | ವಿದ್ಯಾರ್ಹತೆಗನುಗುಣವಾಗಿ ಆಯಾ ವಿಭಾಗಗಳಲ್ಲಿ ಸ್ಥಿರೀಕರಿಸುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |

| ಹೆಸರು | ವಿದ್ಯಾರ್ಹತೆ | ನಿಕಾಯ | ವಿಭಾಗ |
|---|---|---|---|
| ಡಾ. ಆರ್. ತಿಮ್ಮಣ್ಣ | ಎಂ.ಎ ಸಂಸ್ಕೃತ, ಎಂ.ಎ. – ಅರ್ಥಶಾಸ್ತ್ರ, ಅಲಂಕಾರ ವಿದ್ವದುತ್ತಮಾ, KSET, Ph.D–ಸಂಸ್ಕೃತ ಭಾಷೆ & ಸಾಹಿತ್ಯ | ಶಾಸ್ತ್ರ ನಿಕಾಯ | ಅಲಂಕಾರ |
| ಡಾ. ಹೆಚ್. ಕೆ. ಶ್ರುತಿ | ಎಂ.ಎ ವೇದಾಂತ, NET, Ph.D–ವೇದಾಂತ | ವೇದಾಂತ ನಿಕಾಯ | ವೇದಾಂತ |
| ವಿದ್ವಾನ್ ಕೆ.ಕೆ.ರಾಜಶೇಖರ | ಎಂ.ಎ ಸಂಸ್ಕೃತ, ವ್ಯಾಕರಣ ವಿದ್ವದುತ್ತಮಾ, B.ed KSET, M.Phil– (ಸಾಹಿತ್ಯ) | ಶಾಸ್ತ್ರ ನಿಕಾಯ | ವ್ಯಾಕರಣ |
| ಡಾ. ಡಿ. ತೇಜಸ್ವಿನಿ | ಎಂ.ಎ ಸಂಸ್ಕೃತ, ಅಲಂಕಾರ ವಿದ್ವತ್ತಮಾ, ಜೈನ ಸಿದ್ಧಾಂತ ವಿದ್ವದುತ್ತಮಾ, ಜೈನಾಗಮ ಪ್ರವೀಣ, KSET, NET, Ph.D–ಜೈನ ಸಿದ್ಧಾಂತ | ವೇದಾಂತ ನಿಕಾಯ | ವೇದಾಂತ |
| ಶ್ರೀಮತಿ ಜ್ಯೋತಿ ಹೆಚ್.ಪಿ. | ಅಲಂಕಾರ ವಿದ್ವದುತ್ತಮಾ, B.ed | ಶಾಸ್ತ್ರ ನಿಕಾಯ | ಅಲಂಕಾರ |
| ಡಾ. ಶಕುಂತಲಾ ಭಟ್ | ಎಂ.ಎ ಸಂಸ್ಕೃತ, ಎಂ.ಎ ವೇದಾಂತ, NET, Ph.D–ವೇದಾಂತ | ವೇದಾಂತ ನಿಕಾಯ | ವೇದಾಂತ |
| ಡಾ. ಸಾವಿತ್ರಿ ಪೂಜಾರಿ | ಎಂ.ಎ ಸಂಸ್ಕೃತ, ಅಲಂಕಾರ ವಿದ್ವದುತ್ತಮಾ, Ph.D – ಭಾಷೆ & ಸಾಹಿತ್ಯ | ಭಾಷಾ ನಿಕಾಯ | ಭಾಷೆ ಮತ್ತು ಸಾಹಿತ್ಯ |
| ಡಾ. ನಾರಾಯಣಸ್ವಾಮಿ ಎಂ.ಎಸ್ | ಅಲಂಕಾರ ವಿದ್ವದುತ್ತಮಾ, ಅದ್ವೈತ ವೇದಾಂತ ವಿದ್ವದುತ್ತಮಾ, ಎಂ.ಎ. – ಅರ್ಥಶಾಸ್ತ್ರ, B.ed KSET, Ph.D–ಹಸ್ತಪ್ರತಿಶಾಸ್ತ್ರ | ಶಾಸ್ತ್ರ ನಿಕಾಯ | ಅಲಂಕಾರ |
| ಡಾ. ಕೆ. ಎಲ್. ರಾಘವ | ಎಂ.ಎ ಸಂಸ್ಕೃತ, ನ್ಯಾಯಶಾಸ್ತ್ರ ವಿದ್ವದುತ್ತಮಾ, NET, Ph.D–ನ್ಯಾಯಶಾಸ್ತ್ರ | ಶಾಸ್ತ್ರ ನಿಕಾಯ | ನ್ಯಾಯ ಮತ್ತು ವೈಶೇಷಿಕ |
| ಶ್ರೀ ಜಗನ್ನಾಥಪೂಜಾರ್ ಆರ್ | ಎಂ.ಎ ದ್ವೈತ ವೇದಾಂತ ವಿದ್ವದುತ್ತಮಾ, ನ್ಯಾಯಶಾಸ್ತ್ರ ವಿದ್ವದುತ್ತಮಾ, M.Phil–ದ್ವೈತ ವೇದಾಂತ, ತಂತ್ರಸಾರ ಆಗಮ ಪ್ರವೀಣ | ವೇದಾಂತ ನಿಕಾಯ | ವೇದಾಂತ |
| ಡಾ. ಗಿರೀಶ್‌ಭಟ್ | ಎಂ.ಎ ಸಂಸ್ಕೃತ, KSET, Ph.D–ಅಲಂಕಾರ/ ಹಸ್ತಪ್ರತಿಶಾಸ್ತ್ರ, PG.Diplomo–ಹಸ್ತಪ್ರತಿಶಾಸ್ತ್ರ, B.ed | ಭಾಷಾ ನಿಕಾಯ | ಹಸ್ತಪ್ರತಿಶಾಸ್ತ್ರ |
| ವಿಜಯಲಕ್ಷ್ಮಿ ಕೆ.ಜಿ | ಜೈನ ಸಿದ್ಧಾಂತ ವಿದ್ವದುತ್ತಮಾ, B.ed | ವೇದಾಂತ ನಿಕಾಯ | ವೇದಾಂತ |
| ಕಾಂತಾಮಣಿ | ಅಲಂಕಾರ ವಿದ್ವದುತ್ತಮಾ, | ಶಾಸ್ತ್ರ ನಿಕಾಯ | ಅಲಂಕಾರ |
| ಡಾ. ತೇಜಸ್ವಿನಿ ಬಿದರಿ | ಎಂ.ಎ ಅಲಂಕಾರ, KSET, Ph.D–ಅಲಂಕಾರ, M.Phil–ಅಲಂಕಾರ | ಭಾಷಾ ನಿಕಾಯ | ಭಾಷೆ ಮತ್ತು ಸಾಹಿತ್ಯ |
| ಡಾ. ಹೇಮರಾಜ ಎನ್.ಎಸ್ | ಎಂ.ಎ ಸಂಸ್ಕೃತ, ಅಲಂಕಾರ ವಿದ್ವದುತ್ತಮಾ, B.ed | ಭಾಷಾ ನಿಕಾಯ | ಭಾಷೆ ಮತ್ತು ಸಾಹಿತ್ಯ |

| | | | |
|---|---|---|---|
| | KSET, Ph.D–ಅಲಂಕಾರ, | | |
| ವಿದ್ವಾನ್ ವಾಲ್ಮೀಕರಾಮ | ಎಂ.ಎ ಅಲಂಕಾರ | ಶಾಸ್ತ್ರ ನಿಕಾಯ | ಅಲಂಕಾರ |

| | |
|---|---|
| ನಿರ್ಣಯ | **ಬೋಧನೆ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಯೋಜನಾ ಸಹಾಯಕರನ್ನು(ಶೈಕ್ಷಣಿಕ) ವಿವಿಧ ವಿಭಾಗಗಳಲ್ಲಿ ಸ್ಥಿರೀಕರಣಗೊಳಿಸಲು ಸಭೆಯು ಅನುಮೋದಿಸಿತು.**<br>**ಮಾನ್ಯ ಸದಸ್ಯರಾದ ಡಾ. ಶ್ರೀಕಾಂತ ಪುರೋಹಿತ ಇವರು – "ಬೋಧಕ ಸಿಬ್ಬಂದಿಗಳಿಗೆ ಯೋಜನಾ ಸಹಾಯಕ(ಶೈಕ್ಷಣಿಕ) ಪದನಾಮ ಸೂಕ್ತವಲ್ಲ, ಆದ್ದರಿಂದ ಈ ಪದನಾಮವನ್ನು ಸಹಾಯಕ ಪ್ರಾಧ್ಯಾಪಕ ಎಂದು ಬದಲಾವಣೆ ಮಾಡುವುದು ಯೋಗ್ಯ" ಎಂದು ಅಭಿಪ್ರಾಯಿಸಿದರು. ಈ ಬಗ್ಗೆ ಅಗತ್ಯ ಕ್ರಮ ವಹಿಸಿ ಮುಂದಿನ ಸಭೆಯಲ್ಲಿ ವಿಷಯ ಮಂಡಿಸಲಾಗುವುದು ಎಂದು ಮಾನ್ಯ ಕುಲಪತಿಗಳು ಮತ್ತು ಕುಲಸಚಿವರು ಸಭೆಗೆ ತಿಳಿಸಿದರು.**<br>**ಮಾನ್ಯ ಸದಸ್ಯರಾದ ಡಾ. ನಾಗಪತಿ ಕೆ. ಭಟ್ ಇವರು – "ಬೋಧಕ ಸಿಬ್ಬಂದಿಗಳನ್ನು ಆಯಾ ವಿಭಾಗದಲ್ಲಿ ಸ್ಥಿರೀಕರಿಸಿ ಬೋಧನಾ ಕಾರ್ಯಕ್ಕೆ ತೊಡಗಿಸಬೇಕು" ಎಂದು ಅಭಿಪ್ರಾಯಿಸಿದರು.** |
| **07.** | **ಶ್ರೀ ಅರಬಿಂದೋ ಕಪಾಲಿಶಾಸ್ತ್ರಿ "ವೇದಸಂಸ್ಕೃತಿ" ಸಂಸ್ಥೆಯ ಸಂಶೋಧನಾ ಕೇಂದ್ರದ ಮಾನ್ಯತೆ ನವೀಕರಿಸುವ ಕುರಿತು.**<br><br>**ಶ್ರೀ ಅರಬಿಂದೋ ಕಪಾಲಿಶಾಸ್ತ್ರಿ "ವೇದಸಂಸ್ಕೃತಿ" ಸಂಸ್ಥೆ, #63, 13ನೇ ಮುಖ್ಯರಸ್ತೆ, 4ನೇ ಬಡಾವಣೆ,** ಜಯನಗರ – ಈ ಸಂಸ್ಥೆಯು ದಿ: 13.08.2014ರಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದ್ದು, 2020–21ರಿಂದ 2023–24ರ ವರೆಗೆ ಹಾಗೂ 2023–24 ರಿಂದ 2025–26ರ ವರೆಗೆ ಮಾನ್ಯತೆ ನವೀಕರಣಕ್ಕೆ ಕೋರಿದ್ದು, ನಿಯಮಾನುಸಾರ ಸಂಶೋಧನಕೇಂದ್ರ ಪರಿಶೀಲನ ಸಮಿತಿಯು ಭೇಟಿ ನೀಡಿ ದಾಖಲಾತಿಯನ್ನು ಪರಿಶೀಲಿಸಿ ವರದಿಯನ್ನು ನೀಡಿದೆ. ಈ ಸಂಸ್ಥೆಯು ಸಂಶೋಧನೆ ಮತ್ತು ಗ್ರಂಥಪ್ರಕಾಶನ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದೆ. ಈ ಕೇಂದ್ರವು ಸಂಶೋಧನೆಗೆ ಪೂರಕವಾದ ಪೀಠೋಪಕರಣಗಳು, ಸಂಗಣಕ ವಿಭಾಗ, ಸುಸಜ್ಜಿತ ಗ್ರಂಥಾಲಯ, ಪರಾಮರ್ಶನ ಗ್ರಂಥಗಳು, ನಿಯತಕಾಲಿಕೆಗಳು, ವಿದ್ವತ್‌ಪತ್ರಿಕೆಗಳ ಹಾಗೂ ಮತ್ತಿತರ ಆಧುನಿಕ ಸೌಲಭ್ಯಗಳನ್ನು ಹೊಂದಿದ್ದು ಸಂಶೋಧನೆಗೆ ಪೂರಕವಾಗಿದೆ. ಈ ಹಿನ್ನೆಲೆಯಲ್ಲಿ ಈ ಸಂಸ್ಥೆಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಶೋಧನಾ ಕೇಂದ್ರವೆಂದು ಪರಿಗಣಿಸಿ, 2020–21ರಿಂದ 2023–24ರ ವರೆಗೆ ಹಾಗೂ 2023–24 ರಿಂದ 2025–26ರ ವರೆಗೆ ಮಾನ್ಯತೆಯನ್ನು ನವೀಕರಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಶ್ರೀ ಅರಬಿಂದೋ ಕಪಾಲಿಶಾಸ್ತ್ರಿ "ವೇದಸಂಸ್ಕೃತಿ" ಸಂಸ್ಥೆಯ ಸಂಶೋಧನಾ ಕೇಂದ್ರಕ್ಕೆ 2020–21ರಿಂದ 2023–24ರ ವರೆಗೆ ಹಾಗೂ 2023–24 ರಿಂದ 2025–26ರ ವರೆಗೆ ಮಾನ್ಯತೆ ನವೀಕರಿಸಲು ಅನುಮೋದಿಸಲಾಯಿತು.** |

| | |
|---|---|
| | **ಸಂಶೋಧನ ಕೇಂದ್ರಗಳು ಪ್ರಕಾಶಿಸುವ ಪುಸ್ತಕಗಳ 01 ಪ್ರತಿಯನ್ನು ಉಚಿತವಾಗಿ ವಿಶ್ವವಿದ್ಯಾಲಯಕ್ಕೆ ಉಚಿತವಾಗಿ ನೀಡಲು ಸಂಶೋಧನ ಕೇಂದ್ರಗಳಿಗೆ ಸೂಚಿಸಲು ಹಾಗೂ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಈ ಪುಸ್ತಕಗಳನ್ನು ಪ್ರತ್ಯೇಕವಾಗಿ ಇಡಲು ವ್ಯವಸ್ಥೆ ಮಾಡಲು ತೀರ್ಮಾನಿಸಲಾಯಿತು.** |
| **08.** | **Karnataka Historical Research Society, D. B. Rodda Road Jubilee Circle Dharwad ಈ ಸಂಶೋಧನಾ ಕೇಂದ್ರಕ್ಕೆ ಮಾನ್ಯತೆ ನೀಡುವ ಕುರಿತು.**<br><br>**Karnataka Historical Research Society,** D. B. Rodda Road Jubilee Circle Dharwad – ಈ ಸಂಸ್ಥೆಯು ದಿ: 14.12.2023 ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಕೋರಿ ಪ್ರಸ್ತಾವನೆ ಸಲ್ಲಿಸಿದ್ದು, ದಿ: 22.01.2024ರಂದು ನಿಯಮಾನುಸಾರ ಸಂಶೋಧನಕೇಂದ್ರ ಪರಿಶೀಲನ ಸಮಿತಿಯು ಭೇಟಿ ನೀಡಿ ದಾಖಲಾತಿಯನ್ನು ಪರಿಶೀಲಿಸಿ ವರದಿಯನ್ನು ನೀಡಿದೆ. ಈ ಸಂಸ್ಥೆಯು ಸಂಶೋಧನೆ ಮತ್ತು ಗ್ರಂಥಪ್ರಕಾಶನ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದೆ. ಈ ಕೇಂದ್ರವು ಸಂಶೋಧನೆಗೆ ಪೂರಕವಾದ ಪೀಠೋಪಕರಣಗಳು, ಸಂಗಣಕ ವಿಭಾಗ, ಸುಸಜ್ಜಿತ ಗ್ರಂಥಾಲಯ, ಪರಾಮರ್ಶನ ಗ್ರಂಥಗಳು, ನಿಯತಕಾಲಿಕೆಗಳು, ವಿದ್ವತ್‌ಪತ್ರಿಕೆಗಳ ಹಾಗೂ ಮತ್ತಿತರ ಆಧುನಿಕ ಸೌಲಭ್ಯಗಳನ್ನು ಹೊಂದಿದ್ದು ಸಂಶೋಧನೆಗೆ ಪೂರಕವಾಗಿದೆ. ಈ ಹಿನ್ನೆಲೆಯಲ್ಲಿ ಈ ಸಂಸ್ಥೆಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಶೋಧನಾ ಕೇಂದ್ರವೆಂದು ಪರಿಗಣಿಸಿ, 2023–24 ರಿಂದ 2025–26ರ ವರೆಗೆ ಮಾನ್ಯತೆಯನ್ನು ನೀಡಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **Karnataka Historical Research Society, D. B. Rodda Road Jubilee Circle Dharwad ಈ ಸಂಶೋಧನಾ ಕೇಂದ್ರಕ್ಕೆ 2023–24 ರಿಂದ 2025–26ರ ವರೆಗೆ ಮಾನ್ಯತೆ ನೀಡಲು ಅನುಮೋದಿಸಲಾಯಿತು.** |
| **09.** | **ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಮೈಸೂರು ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ.**<br><br>ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಮೈಸೂರು ಇದು ಭಾರತೀಯ ವಿದ್ಯೆಗಳ ಸಂಶೋಧನೆಗಾಗಿ ಇರುವ ಪ್ರತಿಷ್ಠಿತ ಸಂಸ್ಥೆಯಾಗಿದ್ದು, ಮೈಸೂರು ವಿಶ್ವವಿದ್ಯಾಲಯದಡಿ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿ ಅಮೂಲ್ಯ ಹಸ್ತಪ್ರತಿಗಳ ಅಸಂಖ್ಯ ಸಂಗ್ರಹವಿದೆ. ಪ್ರಮುಖ ಪ್ರಾಚೀನ ಗ್ರಂಥಗಳ ಭಂಡಾರವಿದೆ. ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಹಸ್ತಪ್ರತಿಶಾಸ್ತ್ರವು ಕಾರ್ಯನಿರ್ವಹಿಸುತ್ತಿದ್ದು, ಈ ವಿಭಾಗದ ವಿದ್ಯಾರ್ಥಿಗಳಿಗೆ ಹಸ್ತಪ್ರತಿಗಳ ಉನ್ನತ ಅಧ್ಯಯನಕ್ಕೆ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಧ್ಯಯನಕ್ಕೆ ಇಲ್ಲಿ ಉತ್ತಮ ಅವಕಾಶ ಲಭಿಸುತ್ತದೆ. ಪ್ರಸ್ತುತ, ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಮೈಸೂರು ಈ ಸಂಸ್ಥೆಯೂ ಸಹ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ |

| | |
|---|---|
| | ಮಾಡಿಕೊಳ್ಳಲು ಪ್ರಸ್ತಾವನೆ ಸಲ್ಲಿಸದೆ. ಆದ್ದರಿಂದ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಮೈಸೂರು ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಮೈಸೂರು ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಅನುಮೋದಿಸಲಾಯಿತು.** |
| **10.** | **ಸರ್ಕಾರಿ ಆಯುರ್ವೇದ ಸಂಶೋದನಾ ಕೇಂದ್ರ, ಆಯುಷ್ ಇಲಾಖೆ, ಬೃಂದಾವನ ಬಡಾವಣೆ, ಕೆ.ಆರ್.ಎಸ್ ರಸ್ತೆ, ಮೈಸೂರು ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ.**<br><br>ಸಹಾಯಕ ನಿರ್ದೇಶಕರು, ಸರ್ಕಾರಿ ಆಯುರ್ವೇದ ಸಂಶೋದನಾ ಕೇಂದ್ರ ಇವರು ದಿ: 21.02.2024ರ ತಮ್ಮ ಪತ್ರದಲ್ಲಿ "ಸದರಿ ಸಂಸ್ಥೆಯ ಕರ್ನಾಟಕ ಸರ್ಕಾರದಿಂದ 2017ರಲ್ಲಿ ಸ್ಥಾಪಿತವಾಗಿದ್ದು, ಉತ್ತಮ ಮೂಲಭೂತ ಸೌಕರ್ಯಗಳನ್ನು ಹೊಂದಿದೆ. ಅನೇಕ ಸರ್ಕಾರಿ ಆಯುರ್ವೇದ ಕಾಲೇಜುಗಳೊಂದಿಗೆ ಸಹಯೋಗ ಪಡೆದಿದ್ದು, ಇವುಗಳಲ್ಲಿ ಮತ್ತು ಗ್ರಾಮೀಣ ಆಯುಷ್ ಕೇಂದ್ರಗಳಲ್ಲಿ ಸಾಕಷ್ಟು ಒಳ ಮತ್ತು ಹೊರರೋಗಿಗಳನ್ನು ಹೊಂದಿದೆ. ಕಳೆದ ಅನೇಕ ವರ್ಷಗಳಲ್ಲಿ ಗ್ರಾಮೀಣ ಮತ್ತು ಬುಡಕಟ್ಟು ಜನರಿಗೆ ಸಾಕಷ್ಟು ಆರೋಗ್ಯ ಶಿಬಿರ, ಇನ್ನಿತರ ಸರ್ಕಾರಿ ಪ್ರಾಯೋಜಿತ ಕಾರ್ಯಗಳನ್ನು ನಡೆಸಿದೆ.<br><br>ಭಾರತ ಸರ್ಕಾರದ ಆರೋಗ್ಯ ನೀತಿ–2017 ಸಂಯೋಜಿತ ಸಂಶೋಧನವನ್ನು ಹೇಳಿದೆ. ಸಂಸ್ಕೃತ ಮತ್ತು ಸಂಸ್ಕೃತ ಸಾಹಿತ್ಯವು ಪ್ರಾಚೀನ ಜ್ಞಾನದ ಭಂಡಾರ. ಇದರಿಂದ ಇಂಟಿಗ್ರೇಟೆಡ್ ರಿಸರ್ಚ್ ಗೆ ಸಹಾಯವಾಗುತ್ತದೆ. ಆದ್ದರಿಂದ ಸಾಮರ್ಥ್ಯ ವರ್ಧನೆ, ಪ್ರಾಚೀನ ಸಾಹಿತ್ಯ, ಹಸ್ತಪ್ರತಿಶಾಸ್ತ್ರ ಮೊದಲಾದ ವಿಷಯಗಳ ಬಗ್ಗೆ ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗವನ್ನು ಅಪೇಕ್ಷಿಸಿದ್ದು, ಪ್ರಸಕ್ತ ಸಾಲಿನಲ್ಲಿ CFTRI, DFRL, JSS ಮೈಸೂರು ಮೊದಲಾದ ಸಂಸ್ಥೆಗಳೊಂದಿಗೆ MOU ಮಾಡಿಕೊಳ್ಳುತ್ತಿದ್ದು, ಸಂಸ್ಕೃತ ವಿಶ್ವವಿದ್ಯಾಲಯದೊಂದಿಗೂ ಸಹ ಒಡಂಬಡಿಕೆ ಮಾಡಿಕೊಳ್ಳಲು ಪ್ರಸ್ತಾವನೆ ಸಲ್ಲಿಸಿದ್ದಾರೆ. ಸದರಿ ಸಂಸ್ಥೆಯೊಂದಿಗೆ ಒಡಂಡಿಕೆ ಮಾಡಿಕೊಳ್ಳುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಸರ್ಕಾರಿ ಆಯುರ್ವೇದ ಸಂಶೋದನಾ ಕೇಂದ್ರ, ಆಯುಷ್ ಇಲಾಖೆ, ಬೃಂದಾವನ ಬಡಾವಣೆ, ಕೆ.ಆರ್.ಎಸ್ ರಸ್ತೆ, ಮೈಸೂರು ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ಅನುಮೋದಿಸಿತು.** |
| **11.** | **ವ್ಯಾಕರಣ ವಿಭಾಗಕ್ಕೆ ಅತಿಥಿ ಉಪನ್ಯಾಸಕರನ್ನು ನೇಮಿಸುವ ಬಗ್ಗೆ.** |

| | |
|---|---|
| | ಪ್ರೊ. ಶಿವಾನಿ ವಿ., ಡೀನ್ ಶಾಸ್ತ್ರ ನಿಕಾಯ ಮತ್ತು ವ್ಯಾಕರಣ ವಿಭಾಗದ ಮುಖ್ಯಸ್ಥರು ಇವರು – ವ್ಯಾಕರಣ ವಿಭಾಗದಿಂದ ಎಮ್.ಎ. – ವ್ಯಾಕರಣ ಮತ್ತು ಶಾಸ್ತ್ರ – ಬಿ.ಎ. ಕೋರ್ಸ್ ಗಳನ್ನು ನಡೆಸಲಾಗುತ್ತಿದ್ದು, ವಿಭಾಗದ 02 ಅತಿಥಿ ಉಪನ್ಯಾಸಕರ ಅವಧಿಯು ಮಾರ್ಚ – 2024ಕ್ಕೆ ಕೊನೆಗೊಳ್ಳುತ್ತದೆ. ಪ್ರಸ್ತುತ ಸೆಮಿಸ್ಟರ್ ಗೆ ಕಾರ್ಯಭಾರಕ್ಕನುಗುಣವಾಗಿ ಈ ಎರಡು ಶಿಕ್ಷಕರ ಜೊತೆಗೆ ಹೆಚ್ಚುವರಿಯಾಗಿ 03 ಅತಿಥಿ ಉಪನ್ಯಾಸಕರ ಅವಶ್ಯಕತೆಯಿರುವುದಾಗಿ ತಿಳಿಸಿದ್ದು, ವ್ಯಾಕರಣ ವಿಭಾಗಕ್ಕೆ ಒಟ್ಟೂ 05 ಅತಿಥಿ ಉಪನ್ಯಾಸಕರ ನೇಮಕ ಮಾಡುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ವ್ಯಾಕರಣ ವಿಭಾಗದ ಕಾರ್ಯಭಾರಕ್ಕನುಗುಣವಾಗಿ ಹಾಲಿ ಇರುವ 02 ಅತಿಥಿ ಉಪನ್ಯಾಸಕರ ಜೊತೆಗೆ 01 ಹೆಚ್ಚುವರಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಲು ತೀರ್ಮಾನಿಸಲಾಯಿತು. ಉಳಿದಂತೆ ಈ ವಿಭಾಗದಲ್ಲಿ ಸ್ಥಿರೀಕರಣಗೊಂಡ ಯೋಜನಾ ಸಹಾಯಕ(ಶೈ)ರಿಗೆ ಅಗತ್ಯ ಕಾರ್ಯಭಾರವನ್ನು ಹಂಚಿಕೆ ಮಾಡುವುದು ಹಾಗೂ ಬಿ. ಎ. – ಶಾಸ್ತ್ರ ತರಗತಿಗೆ ಆಯಾ ವಿಷಯವನ್ನು ಸಂಬಂಧಿಸಿದ ವಿಭಾಗದ ಅಧ್ಯಾಪಕರಿಂದ ಬೋಧನೆಗೆ ಕ್ರಮ ವಹಿಸಲು ತೀರ್ಮಾನಿಸಲಾಯಿತು.** |
| 12. | ಸಾಂಖ್ಯ ಯೋಗ ವಿಭಾಗಕ್ಕೆ ಅತಿಥಿ ಉಪನ್ಯಾಸಕರನ್ನು ನೇಮಿಸುವ ಬಗ್ಗೆ.<br><br>ಪ್ರೊ. ಶಿವಾನಿ ವಿ., ಡೀನ್ ಶಾಸ್ತ್ರ ನಿಕಾಯ ಮತ್ತು ವ್ಯಾಕರಣ ವಿಭಾಗದ ಮುಖ್ಯಸ್ಥರು ಇವರು – ಶಾಸ್ತ್ರ ನಿಕಾಯದಡಿ ಸಾಂಖ್ಯ ಯೋಗ ವಿಭಾಗದಲ್ಲಿ ಎಮ್.ಎಸ್.ಸಿ – ಯೋಗ ಕೋರ್ಸ್‌ಗಳನ್ನು ನಡೆಸಲಾಗುತ್ತಿದ್ದು, ವಿಭಾಗದ ಪ್ರಸ್ತುತ ಸೆಮಿಸ್ಟರ್‌ಗೆ ಕಾರ್ಯಭಾರಕ್ಕನುಗುಣವಾಗಿ 03 ಅತಿಥಿ ಉಪನ್ಯಾಸಕರ ಅವಶ್ಯಕತೆಯಿರುವುದಾಗಿ ತಿಳಿಸಿದ್ದು, ಸಾಂಖ್ಯ ಯೋಗ ವಿಭಾಗಕ್ಕೆ 03 ಅತಿಥಿ ಉಪನ್ಯಾಸಕರ ನೇಮಕ ಮಾಡುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಸಾಂಖ್ಯ ಯೋಗ ವಿಭಾಗಕ್ಕೆ ಈ ಹಿಂದಿನಂತೆ 01 ಅತಿಥಿ ಉಪನ್ಯಾಸಕರು ಮತ್ತು ಸಂದರ್ಶಕ ಉಪನ್ಯಾಸಕರನ್ನು ನೇಮಕ ಮಾಡಲು ತೀರ್ಮಾನಿಸಲಾಯಿತು. ನ್ಯಾಯ ವೈಶೇಷಿಕ ವಿಭಾಗದ ಯೋಜನಾ ಸಹಾಯಕ(ಶೈ)ರಾದ ಡಾ. ರಾಘವ ಕೆ. ಎಲ್. ಹಾಗೂ ಅತಿಥಿ ಉಪನ್ಯಾಸಕರಾದ ಡಾ. ವೇದೇಶ ನಾಗಸಂಪಿಗೆ ಅವರಿಗೆ ತಲಾ 06 ಗಂಟೆ ಕಾರ್ಯಭಾರವನ್ನು ನೀಡಿ, ಮುಂದಿನ ದಿನಗಳಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿ ಅತಿಥಿ ಉಪನ್ಯಾಸಕರ ನೇಮಕ ಮಾಡುವ ಬಗ್ಗೆ ಚರ್ಚಿಸಿ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.** |
| 13. | ವ್ಯಾಕರಣ ವಿಭಾಗದಿಂದ 2024 ಏಪ್ರಿಲ್ ನಿಂದ ಜೂನ್ ವರೆಗೆ ಆಯೋಜಿಸುವ ವಿವಿಧ ಕಾರ್ಯಕ್ರಮಗಳಿಗೆ |

| | |
|---|---|
| | **ಅನುದಾನ ನೀಡುವ ಬಗ್ಗೆ.**<br><br>ಪ್ರೊ. ಶಿವಾನಿ ವಿ., ಡೀನ್ ಶಾಸ್ತ್ರ ನಿಕಾಯ ಮತ್ತು ವ್ಯಾಕರಣ ವಿಭಾಗದ ಮುಖ್ಯಸ್ಥರು ಇವರು ವ್ಯಾಕರಣ ವಿಭಾಗದಿಂದ 2024 ಏಪ್ರಿಲ್ ನಿಂದ ಜೂನ್ ವರೆಗೆ ಆಯೋಜಿಸುವ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ಅನುದಾನ ಕೋರಿದ್ದು ವಿವರ ಈ ಕೆಳಗಿನಂತಿದೆ.<br><br>1. Vakyarthaprashikshanavarga (Vyakarana – offline) – 200000 Rs<br>2. Hathayogapradeepika (Theory with Demo) (hybrid) – 100000 Rs<br>(In Collaboration with SVyasa)<br>3. Samasa Workshop (Hybrid) – 100000 Rs<br>4. Short term courses (Bhagavadgita – Jnanayoga and Bhaktiyoga) – 50000 Rs<br>5. Workshop of Pythonskrit (Python for Sanskrit Scholars) – 200000 RS<br><br>**ಒಟ್ಟು 6.50ಲಕ್ಷ ರೂ.**<br><br>ವ್ಯಾಕರಣ ವಿಭಾಗದ ಈ ಕಾರ್ಯಕ್ರಮಗಳಿಗೆ ಅನುದಾನ ನೀಡುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯ ಮತ್ತು ಸಂಯೋಜಿತ ಕಾಲೇಜಿನ ವಿವಿಧ ವಿದ್ವಾಂಸರನ್ನು ಆಹ್ವಾನಿಸಿ ವ್ಯಾಕರಣ ವಿಭಾಗದ ಕಾರ್ಯಕ್ರಮಗಳನ್ನು ಆಯೋಜಿಸಿದಲ್ಲಿ ಆರ್ಥಿಕ ಉಳಿತಾಯವಾಗುತ್ತದೆ ಎಂದು ಮಾನ್ಯ ಸದಸ್ಯರು ಅಭಿಪ್ರಾಯಿಸಿದರು. ಸದರಿ ವಿಷಯವು ಹಣಕಾಸಿಗೆ ಸಂಬಂಧಿಸಿದ್ದರಿಂದ ಹಣಕಾಸು ಸಮಿತಿಯಲ್ಲಿ ಇದನ್ನು ಮಂಡಿಸಿ ಅದರಂತೆ ಕ್ರಮವಹಿಸಬಹುದಾಗಿರುತ್ತದೆ ಎಂದು ತೀರ್ಮಾನಿಸಲಾಯಿತು.** |
| | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು.** |
| 01. | **ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು, ಮೈಸೂರು ಇಲ್ಲಿ B.Sc. – ಯೋಗ ಕೋರ್ಸ್ ಪ್ರಾರಂಭಿಸುವ ಬಗ್ಗೆ.**<br><br>ಪ್ರಾಚಾರ್ಯರು, ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು, ಮೈಸೂರು ಇವರು ದಿ: 19.02.2024ರ ಪತ್ರದಲ್ಲಿ "1868 ರಲ್ಲಿ ಮೈಸೂರಿನ ಮಹಾರಾಜರು ಸ್ಥಾಪಿಸಿರುವ 155 ವರ್ಷಗಳ ಇತಿಹಾಸವುಳ್ಳ ನಮ್ಮ ಕಾಲೇಜಿನಲ್ಲಿ ಯೋಗಶಾಸ್ತ್ರದ ಪ್ರಥಮಾಚಾರ್ಯರಾದ ಶ್ರೀ॥ ಕೃಷ್ಣಮಾಚಾರ್ಯರು ಯೋಗಶಾಸ್ತ್ರದ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದು ಅವರ ಬಳಿ ಯೋಗವನ್ನು ಅಭ್ಯಾಸ ಮಾಡಿದ ಎಷ್ಟೋ ಜನ ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಪ್ರಖ್ಯಾತರಾಗಿ ಈಗಲೂ ಸಹ ಕಾಲೇಜಿಗೆ ಹುಡುಕಿಕೊಂಡು ಬರುತ್ತಿದ್ದಾರೆ. ಅದರಲ್ಲೂ ವಿದೇಶಿಯರು ಹೆಚ್ಚಿನ ಆಸಕ್ತಿ ತೋರಿ ಮೈಸೂರಿಗೆ ಯೋಗವನ್ನು ಕಲಿಯಲು ಬರುತ್ತಿದ್ದಾರೆ. ನಮ್ಮ ಕಾಲೇಜಿನಲ್ಲಿ ಯೋಗ ಅಧ್ಯಾಪಕರ ಹುದ್ದೆಯಿದ್ದೂ, ಅದಕ್ಕೆ ಸರ್ಕಾರದ ವತಿಯಿಂದ ಇಲ್ಲಿಯವರೆಗೂ ಯಾವುದೇ ಅಧ್ಯಾಪಕರನ್ನು ನೇಮಕ ಮಾಡದೇ ಇರುವುದರಿಂದ ಈಗಲೂ ಹುದ್ದೆಯು ಖಾಲಿ ಇರುತ್ತದೆ. |

| | |
|---|---|
| | ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಾಂಬರಿಸಿ ಸಕಲ ವಿದ್ಯೆಗಳ ತವರೂರಾದ ಮೈಸೂರಿನ ಪ್ರತಿಷ್ಠಿತ ನಮ್ಮ ಕಾಲೇಜಿನಲ್ಲಿ ತಮ್ಮ ವಿಶ್ವವಿದ್ಯಾಲಯದ ವತಿಯಿಂದ BS.C. IN YOGA THERAPY AND COUNSELING ಎನ್ನುವ ಕೋರ್ಸನ್ನು ಪ್ರಾರಂಭ ಮಾಡಿದಲ್ಲಿ (ಸಂಬಂಧಪಟ್ಟ ಪಠ್ಯವೂ ಸೇರಿದಂತೆ) ಹೆಚ್ಚಿನ ವಿದ್ಯಾರ್ಥಿಗಳು ಯೋಗ ಅಭ್ಯಾಸಕ್ಕಾಗಿ ಕಾಲೇಜಿಗೆ ಸೇರುವುದರೊಂದಿಗೆ, ದೇಶ ವಿದೇಶಗಳಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದ ಹೆಸರು ಪ್ರಸಿದ್ಧಿಯನ್ನು ಪಡೆಯುವುದರಲ್ಲಿ ಯಾವುದೇ ಸಂಶಯವಿಲ್ಲ. ಮುಂದುವರೆದು, BS.C IN YOGA THERAPY AND COUNSELING ಎನ್ನುವ ಹೊಸ ಕೋರ್ಸಿಗೆ ನುರಿತ ಅಧ್ಯಾಪಕರನ್ನು ತಮ್ಮ ವಿಶ್ವವಿದ್ಯಾಲಯದಿಂದಲೇ ನೇಮಕ ಮಾಡಿ, ಅವರಿಗೆ ನೀಡಬೇಕಾದ ವೇತನವನ್ನೂ ಸಹ ತಮ್ಮ ವಿಶ್ವವಿದ್ಯಾಲಯದ ವತಿಯಿಂದಲೇ ಯೋಗಶಾಸ್ತ್ರ ವಿದ್ಯಾಭ್ಯಾಸಕ್ಕಾಗಿ ಸೇರುವ ವಿದ್ಯಾರ್ಥಿಗಳ ಪ್ರವೇಶ ಇತ್ಯಾದಿ ಶುಲ್ಕಗಳ ನಿಧಿಯಿಂದ ಭರಿಸಿದಲ್ಲಿ ಹೆಚ್ಚಿನ ಅನುಕೂಲವಾಗುತ್ತದೆ ಎಂದು ತಮ್ಮಲ್ಲಿ ವಿಜ್ಞಾಪಿಸುತ್ತಾ, 2024-25 ನೇ ಸಾಲಿನಿಂದಲೇ ತರಗತಿಗಳನ್ನು ಪ್ರಾರಂಭಿಸಲು ತಾವು ತೀರ್ಮಾನಿಸಿ, ಸಂಬಂಧಿಸಿದ ನೋಟಿಫಿಕೇಷನ್ ಹಾಗೂ ಪಠ್ಯ ಇತ್ಯಾದಿ ಎಲ್ಲಾ ವಿಷಯಗಳನ್ನು ಕಳಿಸಿಕೊಡುವಂತೆ" ಕೋರಿರುತ್ತಾರೆ. ಈ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು, ಮೈಸೂರು ಇದು ಅತ್ಯಂತ ಪ್ರಾಚೀನ ಸಂಸ್ಕೃತ ಕಾಲೇಜಾಗಿದ್ದು ಇಲ್ಲಿ ಸಂಸ್ಕೃತ ಮತ್ತು ಶಾಸ್ತ್ರ ಪರಂಪರೆಯನ್ನು ಉಳಿಸಿ ಬೆಳೆಸಬೇಕಿದೆ. ಆದ್ದರಿಂದ ಇಲ್ಲಿ B.Sc. IN YOGIC SCIENCE AND COUNSELING ಕೋರ್ಸ್‌ನ್ನು ಪ್ರಾರಂಭಿಸಲು ಸಭೆಯು ಅನುಮೋದಿಸಿತು.** |

**ಪ್ರೊ. ವಿ. ಗಿರೀಶಚಂದ್ರ**
ಕುಲಸಚಿವರು(ಪ್ರ)
ಸದಸ್ಯ ಕಾರ್ಯದರ್ಶಿಗಳು

**ಡಾ. ಅಹಲ್ಯಾ ಎಸ್.**
ಕುಲಪತಿಗಳು
ಅಧ್ಯಕ್ಷರು